ADM/126/2023

Office of the
Prl. District & Sessions Judge,
Bengaluru Rural District,
Bengaluru, Date: 19.12.2024

**NOTIFICATION**

Subject : Recruitment to the post of Typist – Extension of time -reg.

Reference :1. This office Notification No. ADM/126/2023 dated 09.02.2024

2. G.O. No. SiAaSuE 166 SeNeNi 2024 dated 10.09.2024

<><><>

This office has invited applications, through online, for the post of Typist vide Notification cited under reference No. 01. In the said notification maximum age limit was fixed as 35 years for General Merit candidates, 38 years for Category – 2A, 2B, 3A & 3B candidates and 40 years for SC, ST & Cat-I candidates.

As per G.O. No. SiAaSuE 166 SeNeNi 2024 dated 10.09.2024, it is ordered that the maximum age limit is relaxed / extended by three (3) years to all category candidates, as a one time measure.

In view of the above G.O., maximum age limit fixed for the post of Typist in the notification cited under reference No. 01 is modified as under:

| | | |
|---|---|---|
| Maximum Age: | General Merit | 38 years |
| | Cat – 2A, 2B, 3A & 3B | 41 years |
| | SC, ST & Cat-I | 43 years |

Accordingly, 3 years age relaxation in the maximum age limit is provided in respect of all category candidates. The candidates, who were ineligible to submit application due to crossing the maximum age limit as on 20.03.2024 as per the notification dated 09.02.2024 are now eligible due to

age relaxation and they can submit their application through online from 23.12.2024 to 06.01.2025 through the link **https://bengalururural.dcourts.gov.in/online-recruitment/**. Last date for payment of fee will be 06.01.2025. The candidates should be within the extended maximum age limit prescribed for the respective category as on the last date of submission of application i.e., 20.03.2024 stipulated in the Notification dated 09.02.2024.

Except maximum age limit, all other conditions, information, instructions contained in the Notification dated 09.02.2024 shall remain unaltered. Candidates shall read the said Notification dated 09.02.2024 cited under reference No. 01, for further details.

19/12

**(GEETHA K.B.)**
Prl. District & Sessions Judge,
Bengaluru Rural District,
Bengaluru

Copy to:

1. The Registrar General, Hon'ble High Court of Karnataka, Bengaluru alongwith covering letter
2. All the courts of this unit (through e-mail), with a request to display the same in the Notice Board
3. Computer section with a direction to Web-host the same
4. Office copy

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ,</u>**
**<u>ಸಿಟಿ ಸಿವಿಲ್ ನ್ಯಾಯಾಲಯಗಳ ಸಂಕೀರ್ಣ, ಬೆಂಗಳೂರು - 560 009</u>**

**<u>ಅಧಿಸೂಚನೆ ಸಂಖ್ಯೆಃ ಎಡಿಎಂ/126/2023 ದಿನಾಂಕಃ 09.02.2024</u>**

**ವಿಷಯ : ಬೆರಳಚ್ಚುಗಾರರ ಹುದ್ದೆಗಳಿಗಾಗಿ ಅಭ್ಯರ್ಥಿಗಳ ನೇಮಕಾತಿ**

**<> <> <>**

ಬೆಂಗಳೂರು ಗ್ರಾಮಾಂತರ ಜಿಲ್ಲಾ ನ್ಯಾಯಾಲಯ ಘಟಕದಲ್ಲಿ ಖಾಲಿ ಇರುವ ಬೆರಳಚ್ಚುಗಾರರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ **<u>ಆನ್‌ಲೈನ್ ಮೂಲಕ ಅರ್ಜಿಗಳನ್ನು</u>** ಆಹ್ವಾನಿಸಲಾಗಿದೆ.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ವೆಬ್‌ಸೈಟ್ ಲಿಂಕ್ **https://bengalururural.dcourts.gov.in/online-recruitment/**

ಅರ್ಜಿಗಳನ್ನು ಮೇಲ್ಕಂಡ ನಿಗದಿತ/ಸೂಚಿತ ವೆಬ್‌ಸೈಟ್ ಮೂಲಕ ಆನ್‌ಲೈನ್‌ನಲ್ಲಿ ದಿನಾಂಕ **16.02.2024** ರಿಂದ **20.03.2024** ರ ರಾತ್ರಿ **11:59** ರವರೆಗೆ ಮಾತ್ರ ಸಲ್ಲಿಸಬಹುದಾಗಿದೆ.

ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ **20.03.2024** ಆಗಿರುತ್ತದೆ.

**<u>01. ಹುದ್ದೆಯ ಹೆಸರು</u>:** ಬೆರಳಚ್ಚುಗಾರರು

**<u>02. ಹುದ್ದೆಗಳ ಸಂಖ್ಯೆ:</u>** ಒಟ್ಟು 30 ಹುದ್ದೆಗಳು (01 ಹಿಂಬಾಕಿ ಹುದ್ದೆ ಮತ್ತು 29 ಹೊಸ ಹುದ್ದೆಗಳು)

**<u>03. ವೇತನ ಶ್ರೇಣಿ</u>:** ರೂ.21400-500-22400-550-24600-600-27000-650-29600-750-32600-850-36000-950-39800-1100-42000

**04. ಹುದ್ದೆಗಳ ವರ್ಗೀಕರಣ:**

(1) ಹಿಂಬಾಕಿ ಹುದ್ದೆಃ

| ಪ್ರವರ್ಗ | ಹುದ್ದೆಗಳ ಸಂಖ್ಯೆ |
|---|---|
| ಪ್ರವರ್ಗ-1 – ಅಂಗವಿಕಲ | 01# |

#ಸೂಚನೆಃ ಮೇಲ್ಕಂಡ ಹಿಂಬಾಕಿ ಹುದ್ದೆಯು ದೃಷ್ಟಿಮಾಂದ್ಯ ಅಂಗವಿಕಲ ಅಭ್ಯರ್ಥಿಗಳಿಗೆಂದು ಮೀಸಲಿರಿಸಲಾಗಿದೆ. ಆಧಿಸೂಚಿತ ಅಂಗವಿಕಲತೆಯುಳ್ಳ ಅಭ್ಯರ್ಥಿ ಲಭ್ಯವಾಗದಿದ್ದಲ್ಲಿ, ಸದರಿ ಪ್ರವರ್ಗದ ಬೇರೆ ಅಂಗವಿಕಲತೆಯುಳ್ಳ ಅಭ್ಯರ್ಥಿ ಅಥವಾ ಇತರೆ ಅಭ್ಯರ್ಥಿಯನ್ನು ಸರ್ಕಾರಿ ಆದೇಶ ಸಂಖ್ಯೆಃ ಸಿಆಸುಇ 02 ಸೇಹಿಮ 2023 ದಿನಾಂಕ 08.03.2023 ರ ಅನುಸಾರ ಪರಿಗಣಿಸಲಾಗುವುದು.

(2) ಹೊಸ ಹುದ್ದೆಗಳುಃ

| ಪ್ರವರ್ಗ | ಇತರೆ | ಮಹಿಳೆ | ಗ್ರಾಮೀಣ | ಮಾಜಿ ಸೈನಿಕ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತ | ಅಂಗ ವಿಕಲ | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|
| ಪರಿಶಿಷ್ಟ ಜಾತಿ | 1 | 2 | 1 | - | - | - | 1* | - | 05 |
| ಪರಿಶಿಷ್ಟ ಪಂಗಡ | 1 | 1 | - | - | - | - | - | - | 02 |
| ಪ್ರವರ್ಗ-1 | 1 | - | - | - | - | - | - | - | 01 |
| ಪ್ರವರ್ಗ - 2 ಎ | 1 | 2 | 1 | - | - | - | 1* | - | 05 |
| ಪ್ರವರ್ಗ – 2 ಬಿ | 1 | - | - | - | - | - | - | - | 01 |
| ಪ್ರವರ್ಗ - 3 ಎ | 1 | - | - | - | - | - | - | - | 01 |
| ಪ್ರವರ್ಗ - 3 ಬಿ | 1 | - | - | - | - | - | - | - | 01 |
| ಸಾಮಾನ್ಯ ಅರ್ಹತೆ | 2 | 5 | 4 | 1 | - | - | 1* | - | 13 |
| ಒಟ್ಟು | 09 | 10 | 06 | 01 | 0 | 0 | 03 | 0 | 29 |

* ಅಂಗವಿಕಲರಿಗೆಂದು ಮೀಸಲಿರಿಸಲಾದ ಹುದ್ದೆಗಳ ವರ್ಗೀಕರಣಃ

| ಪ್ರವರ್ಗ | ಹುದ್ದೆಗಳ ಸಂಖ್ಯೆ ಮತ್ತು ಸಮತಳ ಮೀಸಲಾತಿ ರೋಸ್ಟರ್ ಬಿಂದು | ಅಂಗವಿಕಲತೆಯ ಸ್ವರೂಪ |
|---|---|---|
| ಪರಿಶಿಷ್ಟ ಜಾತಿ | ಹುದ್ದೆಗಳ ಸಂಖ್ಯೆ - 01<br>ರೋಸ್ಟರ್ ಬಿಂದು - 04 | ಅಂಧತ್ವ / ದೃಷ್ಟಿಮಾಂದ್ಯ |

| | | |
|---|---|---|
| ಪ್ರವರ್ಗ - 2 ಎ | ಹುದ್ದೆಗಳ ಸಂಖ್ಯೆ - 01<br>ರೋಸ್ಟರ್ ಬಿಂದು - 04 | ಅಂಧತ್ವ / ದೃಷ್ಟಿಮಾಂದ್ಯ |
| ಸಾಮಾನ್ಯ ಅರ್ಹತೆ | ಹುದ್ದೆಗಳ ಸಂಖ್ಯೆ - 01<br>ರೋಸ್ಟರ್ ಬಿಂದು - 04 | ಅಂಧತ್ವ / ದೃಷ್ಟಿಮಾಂದ್ಯ |

**05. ಶೈಕ್ಷಣಿಕ ವಿದ್ಯಾರ್ಹತೆ:**

(1) ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಮೂರು ವರ್ಷಗಳ ಡಿಪ್ಲೊಮಾ ಇನ್ ಕಮರ್ಷಿಯಲ್ ಪ್ರಾಕ್ಟೀಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.

(2) ಸಾರ್ವಜನಿಕ ಶಿಕ್ಷಣ ಇಲಾಖೆ ನಡೆಸುವ ಕನ್ನಡ ಮತ್ತು ಇಂಗ್ಲಿಷ್ ಪ್ರೌಢದರ್ಜೆ ಬೆರಳಚ್ಚು ಪರೀಕ್ಷೆಗಳಲ್ಲಿ ಅಥವಾ ಡಿಪ್ಲೊಮಾ ಇನ್ ಕಮರ್ಷಿಯಲ್ ಪ್ರಾಕ್ಟೀಸ್ ಪರೀಕ್ಷೆಯಲ್ಲಿ ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು.

**06. ವಯೋಮಿತಿ:**

ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು ಕನಿಷ್ಠ ವಯೋಮಿತಿಯನ್ನು ಪೂರೈಸಿರಬೇಕು ಮತ್ತು ಗರಿಷ್ಠ ವಯೋಮಿತಿಯ ಒಳಗಿರಬೇಕು.

| | | |
|---|---|---|
| ಕನಿಷ್ಠ ವಯೋಮಿತಿಃ | | 18 ವರ್ಷ |
| ಗರಿಷ್ಠ ವಯೋಮಿತಿಃ | ಸಾಮಾನ್ಯ ವರ್ಗ | 35 ವರ್ಷ |
| | ಪ್ರವರ್ಗ 2 ಎ, 2 ಬಿ, 3 ಎ ಮತ್ತು 3 ಬಿ | 38 ವರ್ಷ |
| | ಪ.ಜಾ., ಪ.ಪಂ., ಮತ್ತು ಪ್ರವರ್ಗ-1 | 40 ವರ್ಷ |

ಸರ್ಕಾರಿ ಸೇವೆಯಲ್ಲಿರುವವರಿಗೆ, ವಿಧವೆಯರಿಗೆ, ಮಾಜಿ ಸೈನಿಕರಿಗೆ ಹಾಗೂ ಅಂಗವಿಕಲರಿಗೆ ಕರ್ನಾಟಕ ಸಿವಿಲ್ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ಅನುಸಾರ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುವುದು.

**<u>07. ಆಯ್ಕೆ ವಿಧಾನ</u>:**

(1) ಈ ಕೆಳಕಂಡ ನಿಯಮಗಳನ್ವಯ ನೇರ ನೇಮಕಾತಿಯ ಮೂಲಕ ಆಯ್ಕೆ ಮಾಡಲಾಗುವುದು.

- ಕರ್ನಾಟಕ ಸಿವಿಲ್ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 1977
- ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರೆ ಹುದ್ದೆಗಳು) (ನೇಮಕಾತಿ) ನಿಯಮಗಳು, 1982
- ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರೆ ಹುದ್ದೆಗಳು) (ನೇಮಕಾತಿ) (ತಿದ್ದುಪಡಿ) ನಿಯಮಗಳು, 2007
- ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರೆ ಹುದ್ದೆಗಳು) (ನೇಮಕಾತಿ) (ತಿದ್ದುಪಡಿ) ನಿಯಮಗಳು, 2021

(2) ಆಯ್ಕೆಗೆ ಅರ್ಹತಾ ಪರೀಕ್ಷೆ ಮತ್ತು ಸಂದರ್ಶನ ಈ ಕೆಳಕಂಡಂತೆ ನಡೆಸಲಾಗುವುದುಃ

- <u>ಅರ್ಹತಾ ಪರೀಕ್ಷೆ:</u> 15 ನಿಮಿಷಗಳ ಅವಧಿ ನೀಡಲಾಗುವ ಉಕ್ತಲೇಖನವನ್ನು ಅಭ್ಯರ್ಥಿಯು ಬೆರಳಚ್ಚು ಮಾಡಬೇಕು. ಅರ್ಹತಾ ಪರೀಕ್ಷೆಯು ಗರಿಷ್ಠ 100 ಅಂಕಗಳನ್ನು ಹೊಂದಿದ್ದು ಉತ್ತೀರ್ಣರಾಗಲು ಕನಿಷ್ಠ 50 ಅಂಕಗಳನ್ನು ನಿಗದಿಪಡಿಸಲಾಗಿರುತ್ತದೆ.
- <u>ಸಂದರ್ಶನ:</u> ನಿಗದಿಪಡಿಸಲಾದ ವಿದ್ಯಾರ್ಹತೆಯ ಪರೀಕ್ಷೆಗಳಲ್ಲಿ ಪಡೆದ ಅಂಕಗಳ ಶೇಕಡಾವಾರು ಮತ್ತು ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅಂಕಗಳ ಶೇಕಡವಾರುವಿನ ಮೊತ್ತದ ಆಧಾರದ ಮೇಲೆ ಜ್ಯೇಷ್ಠತೆಯ ಅನುಸಾರ 01 (ಒಂದು) ಖಾಲಿ ಹುದ್ದೆಗೆ 05 (ಐದು) ಅಭ್ಯರ್ಥಿಗಳ ಅನುಪಾತದಲ್ಲಿ ಅಧಿಸೂಚನೆಯಲ್ಲಿ ಪ್ರಕಟಪಡಿಸಲಾದ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ಮತ್ತು ಮೀಸಲಾತಿಗೆ ಸಂಬಂಧಿಸಿದ ಸರ್ಕಾರದ ಆದೇಶಗಳನ್ನು ಪರಿಗಣಿಸಿ ಅರ್ಹ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನವು 05 ಅಂಕಗಳನ್ನು ಒಳಗೊಂಡಿರುತ್ತದೆ.

(3) ಆಯ್ಕೆ ಪಟ್ಟಿ:

- ನಿಗದಿಪಡಿಸಿದ ವಿದ್ಯಾರ್ಹತೆಯ ಪರೀಕ್ಷೆಗಳಲ್ಲಿ ಪಡೆದ ಒಟ್ಟು ಅಂಕಗಳ ಶೇಕಡಾವಾರು, ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅಂಕಗಳ ಶೇಕಡಾವಾರು ಮತ್ತು ಸಂದರ್ಶನದಲ್ಲಿ ಪಡೆದ ಅಂಕ ಇವುಗಳ ಮೊತ್ತದ ಆಧಾರದ ಮೇಲೆ ಜ್ಯೇಷ್ಠತೆಯ ಅನುಸಾರ ಆಯ್ಕೆ ಪಟ್ಟಿ ಸಿದ್ದಪಡಿಸಲಾಗುವುದು.

**<u>08. ವಿಶೇಷ ಸೂಚನೆ</u>:**

ಆಯ್ಕೆಯಾದ ಅಭ್ಯರ್ಥಿಗಳು ರಾಷ್ಟ್ರೀಯ ಪಿಂಚಣಿ ಯೋಜನೆಗೆ (ಎನ್.ಪಿ.ಎಸ್.) ಒಳಪಡುತ್ತಾರೆ.

**<u>09. ಪರಿವೀಕ್ಷಣಾ ಅವಧಿ:</u>**

ಆಯ್ಕೆಯಾದ ಅಭ್ಯರ್ಥಿಗಳು ಕರ್ನಾಟಕ ಸಿವಿಲ್ ಸೇವೆಗಳ (ಪರಿವೀಕ್ಷಣಾ) ನಿಯಮಗಳು, 1977 ರ ಪ್ರಕಾರ ಕನಿಷ್ಠ 02 ವರ್ಷಗಳ ಕಾಲ ಪರಿವೀಕ್ಷಣಾ ಅವಧಿಯಲ್ಲಿರುತ್ತಾರೆ.

**<u>10. ನಿಗದಿತ ಶುಲ್ಕ ಮತ್ತು ಪಾವತಿಸುವ ವಿಧಾನ:</u>**

| | **ಶುಲ್ಕ** |
|---|---|
| ಸಾಮಾನ್ಯ ಅರ್ಹತೆ ಅಭ್ಯರ್ಥಿಗಳಿಗೆ | ರೂ. 200/- |
| ಪ್ರವರ್ಗ 2 ಎ, 2 ಬಿ, 3 ಎ, 3 ಬಿ ಅಭ್ಯರ್ಥಿಗಳಿಗೆ | ರೂ. 100/- |
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1 ಅಭ್ಯರ್ಥಿಗಳಿಗೆ ಹಾಗೂ ಅಂಗವಿಕಲ/ವಿಕಲಚೇತನ ಅಭ್ಯರ್ಥಿಗಳಿಗೆ | ಶುಲ್ಕ ಪಾವತಿಸುವುದರಿಂದ ವಿನಾಯಿತಿ ನೀಡಲಾಗಿದೆ |

ನಿಗದಿತ ಶುಲ್ಕವನ್ನು ಈ ನ್ಯಾಯಾಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ನೀಡಲಾದ ಲಿಂಕ್ ಮುಖಾಂತರ - ನೆಟ್ ಬ್ಯಾಂಕಿಂಗ್ / ಕ್ರೆಡಿಟ್ ಕಾರ್ಡ್ / ಡೆಬಿಟ್ ಕಾರ್ಡ್ / ಯು.ಪಿ.ಐ. ಮೂಲಕ ಪಾವತಿಸತಕ್ಕದ್ದು.

ಇದನ್ನು ಹೊರತುಪಡಿಸಿ ಯಾವುದೇ ಚಲನ್, ಡಿಮ್ಯಾಂಡ್ ಡ್ರಾಫ್ಟ್, ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಇತ್ಯಾದಿಗಳನ್ನು ಸ್ವೀಕರಿಸಲಾಗುವುದಿಲ್ಲ.

ನಿಗದಿತ ಶುಲ್ಕ ಪಾವತಿಸದ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಒಮ್ಮೆ ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

**<u>11. ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಭರ್ತಿ ಮಾಡುವ ಮೊದಲು ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ತಿಳಿದುಕೊಳ್ಳತಕ್ಕದ್ದು:</u>**

(1) ನ್ಯಾಯಾಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸಲು ದಿನಾಂಕ 20.03.2024 ರ ರಾತ್ರಿ 11:59 ರ ವರೆಗೆ ಅವಕಾಶವಿರುತ್ತದೆ.

(2) ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೇ, ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

(3) ಅಭ್ಯರ್ಥಿಗಳು ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಮೊದಲು ಕೊಟ್ಟಿರುವ ಎಲ್ಲಾ ಸೂಚನೆಗಳನ್ನು ಗಮನವಿಟ್ಟು ಓದಿಕೊಳ್ಳಬೇಕು ಮತ್ತು ತಪ್ಪಾಗದಂತೆ ನೋಡಿಕೊಳ್ಳಬೇಕು. ಸರಿಯಾದ ಮಾಹಿತಿ ನೀಡದೆ ಇರುವ ಮತ್ತು ಅಪೂರ್ಣ ಮಾಹಿತಿಯುಳ್ಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

(4) ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಭ್ಯರ್ಥಿಯು ಅರ್ಜಿಯಲ್ಲಿ ನಮೂದಿಸುವ ಜನ್ಮ ದಿನಾಂಕ, ವಿದ್ಯಾರ್ಹತೆ, ಮೀಸಲಾತಿ ಹಾಗೂ ವಯೋಮಿತಿ ಸಡಿಲಿಕೆ ಇತ್ಯಾದಿ ವಿವರಗಳನ್ನು ಮಾತ್ರ ಪರಿಗಣಿಸಲಾಗುವುದು ಹಾಗೂ ಈ ಬಗ್ಗೆ ಅನಂತರದಲ್ಲಿ ಬದಲಾವಣೆ ಕುರಿತಂತೆ ಸಲ್ಲಿಸುವ ಯಾವುದೇ ಕೋರಿಕೆಯನ್ನು ಪುರಸ್ಕರಿಸಲಾಗುವುದಿಲ್ಲ.

(5) ಅಭ್ಯರ್ಥಿಯು ಮೊಬೈಲ್ ಸಂಖ್ಯೆ ಹಾಗೂ ಇ-ಮೇಲ್ ಐಡಿಯನ್ನು ಕಡ್ಡಾಯವಾಗಿ ನಮೂದಿಸಬೇಕು.

(6) ವಿದ್ಯಾರ್ಹತೆ ಪರೀಕ್ಷೆಗಳ ಗರಿಷ್ಠ ಅಂಕಗಳನ್ನು ಹಾಗೂ ಗಳಿಸಿದ ಅಂಕಗಳನ್ನು ಸರಿಯಾಗಿ ನಮೂದಿಸತಕ್ಕದ್ದು.

(7) ಅಭ್ಯರ್ಥಿಯು ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಬಣ್ಣದ ಭಾವಚಿತ್ರವನ್ನು ಸ್ಕ್ಯಾನ್ ಮಾಡಿ ಅರ್ಜಿಗೆ ಅಪ್‌ಲೋಡ್ ಮಾಡಬೇಕು. ಭಾವಚಿತ್ರದ ಹಿನ್ನೆಲೆ ಬಿಳಿ ಬಣ್ಣದ್ದಾಗಿರಬೇಕು. ಯಾವುದೇ ಕಾರಣಕ್ಕೂ ಭಾವಚಿತ್ರದ ಮೇಲೆ ಸಹಿ ಮಾಡಬಾರದು. (50 kb ಅಳತೆ ಮೀರಿರಬಾರದು ಹಾಗೂ .jpg ನಮೂನೆಯಲ್ಲಿರಬೇಕು)

(8) ಅಭ್ಯರ್ಥಿಯು ಕಪ್ಪು ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಬಿಳಿ ಹಾಳೆಯ ಮೇಲೆ ಸಹಿ ಮಾಡಿ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಬೇಕು (26 kb ಅಳತೆ ಮೀರಿರಬಾರದು ಹಾಗೂ .jpg ನಮೂನೆಯಲ್ಲಿರಬೇಕು)

(9) ಅಭ್ಯರ್ಥಿಯು ಆನ್‌ಲೈನ್ ಅರ್ಜಿಯಲ್ಲಿ ಕೇಳಲಾದ ಎಲ್ಲಾ ಮಾಹಿತಿಗಳನ್ನು ಸರಿಯಾಗಿ ಭರ್ತಿಮಾಡಿ ನಿಗದಿತ ಶುಲ್ಕ ಪಾವತಿಸಲು ಕ್ರಮ ಕೈಗೊಳ್ಳುವುದು. ತದನಂತರ ಭರ್ತಿ ಮಾಡಿದ ಅರ್ಜಿಯನ್ನು ಹಾಗೂ ಶುಲ್ಕ ಪಾವತಿಸಿದ ರಸೀದಿಯನ್ನು ಡೌನ್‌ಲೋಡ್ ಮಾಡಿಕೊಂಡು ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೂ ತಮ್ಮ ಹತ್ತಿರ ಕಾಯ್ದಿರಿಸಿಕೊಳ್ಳತಕ್ಕದ್ದು ಹಾಗೂ ಅರ್ಹತಾ ಪರೀಕ್ಷೆಯ/ಸಂದರ್ಶನದ/ದಾಖಲಾತಿ ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

## 12. ಇತರೆ ಸೂಚನೆಗಳು:

(1) ಅರ್ಹ ಅಭ್ಯರ್ಥಿಗಳಿಗೆ ಎಸ್.ಎಂ.ಎಸ್. / ಇ-ಮೇಲ್ ಮುಖಾಂತರ ಮಾಹಿತಿ ನೀಡಲಾಗುವುದು. ಒಂದು ವೇಳೆ ಎಸ್.ಎಂ.ಎಸ್. ಅಥವಾ ಇ-ಮೇಲ್ ಮುಖಾಂತರ ಅಭ್ಯರ್ಥಿಗಳಿಗೆ ಸಂದೇಶ ತಲುಪದಿದ್ದಲ್ಲಿ ಈ ಪ್ರಾಧಿಕಾರ ಹೊಣೆಯಾಗಿರುವುದಿಲ್ಲ.

(2) ಅರ್ಹತಾ ಪರೀಕ್ಷೆಗೆ ಮತ್ತು ಸಂದರ್ಶನಕ್ಕೆ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಹಾಗೂ ಅರ್ಹತಾ ಪರೀಕ್ಷೆಯ ಮತ್ತು ಸಂದರ್ಶನದ ವೇಳಾಪಟ್ಟಿಯನ್ನು ಈ ನ್ಯಾಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

(3) ಅರ್ಹ ಅಭ್ಯರ್ಥಿಗಳು ಈ ನ್ಯಾಯಾಲಯದ ವೆಬ್‌ಸೈಟ್‌ನಿಂದ ಅರ್ಹತಾ ಪರೀಕ್ಷೆಯ ಪ್ರವೇಶಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು.

(4) ಅರ್ಹತಾ ಪರೀಕ್ಷೆಗೆ ಪ್ರವೇಶಪತ್ರವನ್ನು ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ರವಾನಿಸಲಾಗುವುದಿಲ್ಲ.

(5) ಅಭ್ಯರ್ಥಿಗಳು ಕಡ್ಡಾಯವಾಗಿ ಪ್ರವೇಶಪತ್ರವನ್ನು ಡೌನ್‌ಲೋಡ್ ಮಾಡಿಕೊಂಡು ಒಂದು ಮೂಲ ಗುರುತಿನ ಚೀಟಿಯೊಂದಿಗೆ (ವೋಟರ್ ಐಡಿ/ ಆಧಾರ್ ಕಾರ್ಡ್/ ಡ್ರೈವಿಂಗ್ ಲೈಸನ್ಸ್ / ಪ್ಯಾನ್ ಕಾರ್ಡ್ / ಪಾಸ್‌ಪೋರ್ಟ್) ಅರ್ಹತಾ ಪರೀಕ್ಷೆಗೆ ಮತ್ತು ಸಂದರ್ಶನಕ್ಕೆ ಹಾಜರಾಗತಕ್ಕದ್ದು.

(6) ಅಭ್ಯರ್ಥಿಗಳು ಸಂದರ್ಶನದ / ದಾಖಲಾತಿ ಪರಿಶೀಲನೆಯ ಸಮಯದಲ್ಲಿ ಈ ಕೆಳಕಂಡ ಮೂಲ ದಾಖಲೆಗಳನ್ನು ಹಾಜರುಪಡಿಸತಕ್ಕದ್ದುಃ

(i) ಆನ್‌ಲೈನ್ ಮೂಲಕ ಸಲ್ಲಿಸಲಾದ ಅರ್ಜಿಯ ಪ್ರತಿ

(ii) ಹುದ್ದೆಗೆ ನಿಗದಿಪಡಿಸಿದ ಶುಲ್ಕವನ್ನು ಪಾವತಿಸಿದ ರಶೀದಿ ಪ್ರತಿ

(iii) ಜನ್ಮದಿನಾಂಕ ದಾಖಲೆಃ ಎಸ್.ಎಸ್.ಎಲ್.ಸಿ. ಅಂಕಪಟ್ಟಿ / ಜನನ ಪ್ರಮಾಣ ಪತ್ರ

(iv) ಶೈಕ್ಷಣಿಕ ವಿದ್ಯಾರ್ಹತೆ ದಾಖಲೆಃ ಪಿ.ಯು.ಸಿ. / ಡಿಪ್ಲೊಮಾ ಇನ್ ಕಮರ್ಷಿಯಲ್ ಪ್ರಾಕ್ಟೀಸ್ ಡಿಪ್ಲೊಮಾ, ಪ್ರೌಢ ದರ್ಜೆ ಕನ್ನಡ ಮತ್ತು ಇಂಗ್ಲಿಷ್ ಬೆರಳಚ್ಚು ಪರೀಕ್ಷೆ ಸಂಬಂಧಿತ ಅಂಕಪಟ್ಟಿ / ಪ್ರಮಾಣ ಪತ್ರ

(v) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ನಮೂನೆ-ಡಿ ಯಲ್ಲಿ, ಪ್ರವರ್ಗ-1 ರ ಅಭ್ಯರ್ಥಿಗಳು ನಮೂನೆ-ಇ ಯಲ್ಲಿ ಮತ್ತು 2ಎ, 2ಬಿ, 3ಎ ಮತ್ತು 3ಬಿ ಗೆ ಸೇರಿದ ಅಭ್ಯರ್ಥಿಗಳು ನಮೂನೆ-ಎಫ್ ನಲ್ಲಿ ಸಂಬಂಧಿಸಿದ ತಹಶೀಲ್ದಾರರಿಂದ ಪಡೆದ ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣಪತ್ರಗಳು

(vi) ಗ್ರಾಮೀಣ / ಕನ್ನಡ ಮಾಧ್ಯಮ / ಮಾಜಿ ಸೈನಿಕ / ಅಂಗವಿಕಲ / ಯೋಜನಾ ನಿರಾಶ್ರಿತ / ತೃತೀಯಲಿಂಗ ಮೀಸಲಾತಿ ಕೋರುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರಗಳು ನೀಡಿದ ಪ್ರಮಾಣಪತ್ರಗಳು

(vii) ಅಂಗವಿಕಲ ಮೀಸಲಾತಿ ಕೋರುವ ಅಭ್ಯರ್ಥಿಗಳು ದಿನಾಂಕ 19.11.2005 ರ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 115 ಸೆನೆನಿ 2005 ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿನ ವೈದ್ಯಕೀಯ ಪ್ರಮಾಣಪತ್ರ (ಇತರೆ ನಮೂನೆಯ ಪ್ರಮಾಣಪತ್ರ / ಗುರುತಿನ ಚೀಟಿಗಳನ್ನು ಪರಿಗಣಿಸುವುದಿಲ್ಲ)

(viii) ಮಾಜಿ ಸೈನಿಕ ವರ್ಗದ ಮೀಸಲಾತಿ ಕೋರುವ ಅಭ್ಯರ್ಥಿಗಳು ಸೈನಿಕ ಸೇವೆಯಿಂದ ಬಿಡುಗಡೆಯಾದ/ ವಿಮುಕ್ತಿ ಹೊಂದಿದ ಬಗೆಗಿನ ಪ್ರಮಾಣಪತ್ರ

(ix) ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕಕ್ಕೆ 06 ತಿಂಗಳ ಮುಂಚಿತವಲ್ಲದ, ಇಬ್ಬರು ಗೌರವಾನ್ವಿತ ವ್ಯಕ್ತಿಗಳಿಂದ ಪಡೆದ ನಡತೆ ಪ್ರಮಾಣಪತ್ರಗಳು ಹಾಗೂ ಅಭ್ಯರ್ಥಿಯು ಕೊನೆಯದಾಗಿ ಓದಿದ ವಿದ್ಯಾಸಂಸ್ಥೆಯಿಂದ ಪಡೆದ ನಡತೆ ಪ್ರಮಾಣಪತ್ರ

(x) ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 19 ಎಸ್ ಆರ್ ಆರ್ 2020 ದಿನಾಂಕ 12.10.2020 ರ ಪ್ರಕಾರ ಸೇವಾನಿರತ ಅಭ್ಯರ್ಥಿಗಳು ಆಯ್ಕೆಯಾದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಆಯ್ಕೆಪಟ್ಟಿ ಪ್ರಕಟವಾದ ಕೂಡಲೆ ಪಡೆದುಕೊಂಡು ಈ ನೇಮಕಾತಿ ಪ್ರಾಧಿಕಾರ ಸೂಚಿಸಿದಾಗ ಸಲ್ಲಿಸುವುದು

(7) ಮೇಲ್ಕಂಡ ದಾಖಲೆಗಳನ್ನು ಅರ್ಜಿ ಸಲ್ಲಿಸುವ ಮೊದಲೇ ಸಕ್ಷಮ ಪ್ರಾಧಿಕಾರಗಳಿಂದ ನಿಗದಿತ ನಮೂನೆಗಳಲ್ಲಿ ಪಡೆದಿರತಕ್ಕದ್ದು. ಎಲ್ಲಾ ಪ್ರಮಾಣಪತ್ರವು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಸಿಂಧುವಾಗಿರಬೇಕು.

(8) ಅರ್ಹತಾ ಪರೀಕ್ಷೆಗೆ/ಸಂದರ್ಶನಕ್ಕೆ/ದಾಖಲಾತಿ ಪರಿಶೀಲನೆಗೆ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬೇಕು.

(9) ಈ ನೇಮಕಾತಿ ಸಂಬಂಧವಾಗಿ ಅಭ್ಯರ್ಥಿಗಳು ಈ ಕಚೇರಿಯೊಂದಿಗೆ ಯಾವುದೇ ಪತ್ರ-ವ್ಯವಹಾರ ನಡೆಸಲು ಆಸ್ಪದವಿರುವುದಿಲ್ಲ.

(10) ಅಭ್ಯರ್ಥಿಯು ನಕಲಿ ಅಭ್ಯರ್ಥಿಯಾಗಿರುವುದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವುದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವುದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವುದು ಅಥವಾ ನೇಮಕಾತಿ ಉದ್ದೇಶಗಳಿಗೆ ನಡೆಸಲಾಗುವ ಪರಿಶೀಲನೆ/ ಪ್ರಕ್ರಿಯೆಗಳ ಸಂದರ್ಭಗಳಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವುದು ಅಥವಾ ಅನುಸರಿಸಲು ಪ್ರಯತ್ನಿಸಿರುವುದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವುದು ಕಂಡುಬಂದಲ್ಲಿ ಅವರ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು ಅಲ್ಲದೇ ಅಭ್ಯರ್ಥಿಯನ್ನು ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡಿಸಲಾಗುವುದು.

**Sd/-**
**(ಎಮ್.ಎಲ್. ರಘುನಾಥ್)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು

ಪ್ರತಿಯನ್ನು ಗೌರವಗಳೊಂದಿಗೆ ಮಾಹಿತಿಗಾಗಿಃ

ಮಾನ್ಯ ಮಹಾ ವಿಲೇಖನಾಧಿಕಾರಿಗಳು, ಗೌರವಾನ್ವಿತ ಉಚ್ಚ ನ್ಯಾಯಾಲಯ, ಬೆಂಗಳೂರು

ಪ್ರತಿಗಳುಃ

1. ಪ್ರಧಾನ ಕಾರ್ಯದರ್ಶಿಗಳು, ಕಾನೂನು ಇಲಾಖೆ, ಬೆಂಗಳೂರು
2. ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು ಹಾಗೂ ಮುಖ್ಯ ನ್ಯಾಯಾಧೀಶರು, ಲಘುವ್ಯವಹಾರಗಳ ನ್ಯಾಯಾಲಯ, ಬೆಂಗಳೂರು - ಅಧಿಸೂಚನೆಯನ್ನು ತಮ್ಮ ನ್ಯಾಯಾಲಯದ ಸೂಚನಾ ಫಲಕದಲ್ಲಿ ಪ್ರದರ್ಶಿಸಲು ಕೋರಲಾಗಿದೆ
3. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಬೀದರ್, ಚಾಮರಾಜನಗರ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ದಾವಣಗೆರೆ, ಧಾರವಾಡ, ಗದಗ, ಹಾಸನ, ಚಿತ್ರದುರ್ಗ, ಹಾವೇರಿ, ಕಲಬುರ್ಗಿ, ಕೊಡಗು, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ರಾಮನಗರ, ದಕ್ಷಿಣ ಕನ್ನಡ, ಶಿವಮೊಗ್ಗ, ತುಮಕೂರು, ಉಡುಪಿ, ಉತ್ತರ ಕನ್ನಡ, ವಿಜಯಪುರ, ಯಾದಗಿರಿ - ಅಧಿಸೂಚನೆಯನ್ನು ತಮ್ಮ ನ್ಯಾಯಾಲಯದ ಸೂಚನಾ ಫಲಕದಲ್ಲಿ ಪ್ರದರ್ಶಿಸಲು ಕೋರಲಾಗಿದೆ
4. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳ ಸೂಚನಾ ಫಲಕದಲ್ಲಿ ಪ್ರಕಟಿಸಲು
5. ಆಯುಕ್ತರು, ವಾರ್ತಾ ಇಲಾಖೆ, ನಂ. 17, ಭಗವಾನ್ ಮಹಾವೀರ ರಸ್ತೆ (ಇನ್‌ಫೆಂಟ್ರಿ ರಸ್ತೆ), ಬೆಂಗಳೂರು-560001
6. ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಕೆಂಪೇಗೌಡ ರಸ್ತೆ, ಬೆಂಗಳೂರು-560009